# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 84 |
| ಉತ್ತರಿಸಬೇಕಾದ ದಿನಾಂಕ | : | 13-02-2024 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಹಕಾರಿ ಸಂಸ್ಥೆಗಳು ತಮ್ಮದೇ ಷೇರು ಬಂಡವಾಳದ ಸಂಪನ್ಮೂಲಗಳಿಂದ ನಿರ್ವಹಿಸುತ್ತಿರುವ ಆರ್ಥಿಕ ಚಟುವಟಿಕೆಗಳಾವುವು; ಸರ್ಕಾರದ ವಿವಿಧ ಯೋಜನೆಗಳ ಮೂಲಕ ಹಣಕಾಸು, ಸಹಾಯಧನ ಪಡೆದು ಹಾಗೂ ನಾಗರಿಕ ಸೇವೆಗಳ ಮೂಲಕ ನಡೆಸುತ್ತಿರುವ ಚಟುವಟಿಕೆಗಳಾವುವು; (ವಿವರ ನೀಡುವುದು) | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕುಗಳು ತಮ್ಮದೇ ಷೇರು ಬಂಡವಾಳ ಮತ್ತು ಸಂಪನ್ಮೂಲಗಳಿಂದ ಈ ಕೆಳಕಂಡ ಆರ್ಥಿಕ ಚಟುವಟಿಕೆಗಳನ್ನು ಕೈಗೊಂಡಿರುತ್ತವೆ.<br>1. ವ್ಯವಸಾಯೇತರ ಸಾಲ ವಿತರಣೆ<br>2. ಚಿನ್ನಾಭರಣದ ಸಾಲ ವಿತರಣೆ<br>3. ನೌಕರರಿಗೆ ಮತ್ತು ಗ್ರಾಹಕರಿಗೆ ಅವಶ್ಯವಿರುವ ಗೃಹ, ವಿದ್ಯಾಭ್ಯಾಸ ಸಾಲ, ವೈಯಕ್ತಿಕ ಸಾಲ ಮುಂತಾದ ಉದ್ದೇಶಗಳಿಗೆ ಸಾಲ ವಿತರಣೆ<br>4. ವ್ಯಾಪಾರ ಅಭಿವೃದ್ಧಿ ಸಾಲ<br>5. ಪ್ರಾಥಮಿಕ ಸಹಕಾರ ಸಂಘಗಳು ಮತ್ತು ಇತರೇ ಸಹಕಾರ ಸಂಘಗಳಿಗೆ ಸಾಲ ವಿತರಣೆ<br>6. ಆರ್‌ಬಿಐ ನಿಗದಿಪಡಿಸಿದ ಮಾನದಂಡಗಳಂತೆ ಎಸ್‌ಎಲ್‌ಆರ್ ಸಂಪನ್ಮೂಲದಲ್ಲಿ ಸರ್ಕಾರಿ ಬಾಂಡ್ ಗಳಲ್ಲಿ ಎಸ್‌ಎಲ್‌ಆರ್ ಹೂಡಿಕೆ<br>7. ಇತರೇ ಬ್ಯಾಂಕ್ ಗಳಲ್ಲಿ ನಾನ್ ಎಸ್‌ಎಲ್‌ಆರ್ ಹೂಡಿಕೆ<br>8. ಸಕ್ಕರೆ ಕಾರ್ಖಾನೆ ಮತ್ತು ಇತರೆ ಉದ್ದಿಮೆಗಳಿಗೆ ಸಾಲ ವಿತರಣೆ<br><br>ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕುಗಳು ಸರ್ಕಾರದ ವಿವಿಧ ಯೋಜನೆಗಳ ಮೂಲಕ ಹಣಕಾಸು, ಸಹಾಯಧನ ಪಡೆದು ಈ ಕೆಳಕಂಡ ಆರ್ಥಿಕ ಚಟುವಟಿಕೆಗಳನ್ನು ಕೈಗೊಂಡಿರುತ್ತವೆ.<br>1. ಶೂನ್ಯ ಬಡ್ಡಿದರದಲ್ಲಿ ರೂ.5.00 ಲಕ್ಷಗಳವರೆಗೆ ಅಲ್ಪಾವಧಿ ಕೃಷಿ ಸಾಲ ವಿತರಣೆ<br>2. ಶೇ.3 ರ ಬಡ್ಡಿದರದಲ್ಲಿ ರೂ.15.00 ಲಕ್ಷಗಳ ವರಗೆ ಮಧ್ಯಮಾವಧಿ/ದೀರ್ಘಾವಧಿ ಕೃಷಿ ಸಾಲ ವಿತರಣೆ. |

| | | |
|---|---|---|
| | | 3. ಮಹಿಳಾ ಸ್ವಸಹಾಯ ಗುಂಪುಗಳಿಗೆ ರೂ.5.00 ಲಕ್ಷಗಳವರೆಗಿನ ಸಾಲವನ್ನು ಶೂನ್ಯ ಬಡ್ಡಿ ದರ ಮತ್ತು ಪುರುಷ ಸ್ವಸಹಾಯ ಗುಂಪುಗಳಿಗೆ ರೂ.5.00 ಲಕ್ಷಗಳ ಸಾಲವನ್ನು ಹಾಗೂ ಹೈನುಗಾರಿಕೆಗೆ ರೂ.10.00 ಲಕ್ಷಗಳವರೆಗಿನ ಸಾಲವನ್ನು ಶೇ.4 ರ ಬಡ್ಡಿ ದರದಲ್ಲಿ ವಿತರಣೆ.<br>4. ರೈತರು ಬೆಳೆದಿರುವ ಕೃಷಿ ಉತ್ಪನ್ನಗಳ ಸಂಗ್ರಹಣೆ ಮೇಲೆ ಶೇ.7ರ ಬಡ್ಡಿ ದರದಲ್ಲಿ ಕೃಷಿ ಅಡಮಾನ ಸಾಲ ವಿತರಣೆ.<br><br>ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (ಪ್ಯಾಕ್ಸ್) ನೀಡುತ್ತಿರುವ ನಾಗರಿಕ ಸೇವೆಗಳು ಈ ಕೆಳಗಿನಂತಿರುತ್ತವೆ.<br>1. ಪ್ಯಾಕ್ಸ್‌ಗಳು ಜನೌಷಧಿ ಕೇಂದ್ರಗಳನ್ನಾಗಿ ಕಾರ್ಯನಿರ್ವಹಿಸುವುದು.<br>2. ಪ್ಯಾಕ್ಸ್‌ಗಳು ಮಲ್ಟಿ ಸರ್ವೀಸ್ ಸೆಂಟರ್ಸ್‌ಗಳಾಗಿ ಕೆಲಸ ನಿರ್ವಹಿಸುವುದು.<br>3. ಪ್ಯಾಕ್ಸ್‌ಗಳಲ್ಲಿ ಕಿಸಾನ್ ಸಮೃದ್ಧಿ ಕೇಂದ್ರಗಳನ್ನು ತೆರೆಯುವುದು.<br>4. ಪ್ಯಾಕ್ಸ್‌ಗಳನ್ನು ಎಲ್‌ಪಿಜಿ ಹಾಗೂ ಪೆಟ್ರೋಲ್ ಗಳ ವಿತರಕರನ್ನಾಗಿ ಪರಿವರ್ತಿಸುವುದು.<br>ಪ್ಯಾಕ್ಸ್‌ಗಳಲ್ಲಿ ವಿಶ್ವದ ಅತಿ ದೊಡ್ಡ ಧಾನ್ಯ ಸಂಗ್ರಹಿಸಲು ಉಗ್ರಾಣ ಯೋಜನೆ. |
| ಆ) | ಪ್ರಸ್ತುತ ಸರ್ಕಾರದ ಆಯವ್ಯಯದಲ್ಲಿ ಘೋಷಿಸಿದಂತೆ ಶೂನ್ಯ ಬಡ್ಡಿದರದಲ್ಲಿ ರೈತರಿಗೆ 5.00 ಲಕ್ಷ ರೂಪಾಯಿ ಮೊತ್ತದವರೆಗಿನ ಅಲ್ಪಾವಧಿ ಬೆಳೆ ಸಾಲವನ್ನು ಮತ್ತು 15 ಲಕ್ಷ ರೂಪಾಯಿ ಮೊತ್ತದ ದೀರ್ಘಾವಧಿ ಸಾಲವನ್ನು ಮಂಜೂರು ಮಾಡಲಾಗುತ್ತಿದೆಯೇ; ಈ ಕುರಿತು ಅನುಸರಿಸುತ್ತಿರುವ ನಿಯಮಗಳಾವುವು; ಈ ಕುರಿತು ಸಹಕಾರಿ ಸಂಸ್ಥೆಗಳಿಗೆ ಸಲ್ಲಿಕೆಯಾದ ಸಾಲದ ಅರ್ಜಿಗಳೆಷ್ಟು; ಮಂಜೂರು ಮಾಡಿದ ಸಾಲಗಳ ಸಂಖ್ಯೆಯೆಷ್ಟು; ಮೊತ್ತವೆಷ್ಟು; (ಜಿಲ್ಲಾವಾರು ವಿವರ ನೀಡುವುದು) | ಹೌದು, ಸರ್ಕಾರದ ಆದೇಶ ಸಂಖ್ಯೆ:ಸಿಒ/167/ಸಿಎಲ್‌ಎಸ್/2023, ದಿ:08.09.2023 ರನ್ವಯ ರೂ.5.00 ಲಕ್ಷದವರೆಗೆ ಅಲ್ಪಾವಧಿ ಸಾಲವನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ:ಸಿಒ:167(1):ಸಿಎಲ್‌ಎಸ್:2023 ದಿ:08.09.2023 ರನ್ವಯ ರೂ.15.00 ಲಕ್ಷದವರೆಗೆ ಮಧ್ಯಮಾವಧಿ ಮತ್ತು ಧೀರ್ಘಾವಧಿ ಸಾಲವನ್ನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಪಿಕಾರ್ಡ್ ಬ್ಯಾಂಕ್‌ಗಳು ಹಾಗೂ ಡಿಸಿಸಿ ಬ್ಯಾಂಕ್ ಗಳು ಸಾಲವನ್ನು ಮಂಜೂರು ಮಾಡುತ್ತಿರುತ್ತವೆ.<br><br>ಸಹಕಾರ ಸಂಸ್ಥೆಗಳು ಸಾಲ ವಿತರಿಸಲು ಅನುಸರಿಸುತ್ತಿರುವ ನಿಯಮಗಳು ಈ ಕೆಳಗಿನಂತಿರುತ್ತವೆ. ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳ ಮೂಲಕ ರೂ.5.00 ಲಕ್ಷಗಳವರೆಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುವ ಅಲ್ಪಾವಧಿ ಬೆಳೆ ಸಾಲ ಯೋಜನೆ. |

1) ರೈತನು ಸಂಘಕ್ಕೆ ಸಾಲ ಮತ್ತು ಸದಸ್ಯತ್ವಕ್ಕಾಗಿ ಅರ್ಜಿ ಸಲ್ಲಿಸತಕ್ಕದ್ದು.
2) ರೈತನ ಭೂಮಿ ಅಥವಾ ವಾಸ ಸ್ಥಳ ಸಂಘದ ವ್ಯಾಪ್ತಿಯಲ್ಲಿರತಕ್ಕದ್ದು,
3) ರೈತನು ಸಾಲ ಪಡೆಯಲು ನೀಡುವ ಭೂ ದಾಖಲೆಗಳಲ್ಲಿ ಇತರೆ ಯಾವುದೇ ಬ್ಯಾಂಕಿನಿಂದ ಸಾಲ ಪಡೆದಿರಬಾರದು.
4) ಬೆಳೆ ಸಾಲಕ್ಕಾಗಿ ರೈತನು ಹೊಂದಿರುವ ಭೂಹಿಡುವಳಿಗೆ ಮತ್ತು ಬೆಳೆಯುವ ಬೆಳೆಗೆ, ರಾಜ್ಯ ತಾಂತ್ರಿಕ ಸಲಹಾ ಸಮಿತಿ ಪ್ರತಿ ಬೆಳೆಗೆ ನಿಗದಿಪಡಿಸಿದ ಸ್ಕೇಲ್ ಆಫ್ ಫೈನಾನ್ಸ್ ಪ್ರಕಾರ ಬೆಳೆ ಸಾಲದ ಗರಿಷ್ಟ ಮಿತಿಯಾದ ಕ್ರಮಿಕ ಪತ್ತಿನ ಮಿತಿ (NCL) ಗೆ ಸಂಬಂಧಿಸಿದ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಿಂದ ಅನುಮೋದನೆ ಪಡೆದಿರತಕ್ಕದ್ದು.
5) ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲಕ್ಕಾಗಿ ಸಾಲದ ಭದ್ರತೆಗಾಗಿ ಒದಗಿಸುವ ದಾಖಲೆಗಳೊಂದಿಗೆ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.
6) ಇದರ ಆಧಾರದ ಮೇಲೆ ಜಿಲ್ಲಾ ಸಹಕಾರ ಬ್ಯಾಂಕುಗಳು ನಬಾರ್ಡ್‌ನಿಂದ ದೊರೆಯುವ ಪುನರ್ಧನ ಮತ್ತು ತಮ್ಮ ಬಂಡವಾಳದ ಲಭ್ಯತೆ ಆಧರಿಸಿ ರೈತರಿಗೆ ಸಾಲ ಮಂಜೂರು ಮಾಡಲಾಗುತ್ತದೆ.

ರೂ.3.00 ಲಕ್ಷದಿಂದ ರೂ.5.00 ಲಕ್ಷಗಳವರೆಗಿನ ಅಲ್ಪಾವಧಿ ಕೃಷಿ ಸಾಲಕ್ಕಾಗಿ 6715 ರೈತರಿಂದ ಅರ್ಜಿಗಳು ಸಹಕಾರಿ ಸಂಸ್ಥೆಗಳಿಗೆ ಸಲ್ಲಿಕೆಯಾಗಿದ್ದು, ಈ ಪೈಕಿ 6354 ಅರ್ಜಿಗಳಿಗೆ ರೂ.286.76 ಕೋಟಿ ಸಾಲ ಮಂಜೂರಾಗಿರುತ್ತದೆ.

ರೂ.10.00 ಲಕ್ಷದಿಂದ ರೂ.15.00 ಲಕ್ಷಗಳವರೆಗಿನ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲಕ್ಕಾಗಿ 447 ರೈತರಿಂದ ಅರ್ಜಿಗಳು ಸಹಕಾರಿ ಸಂಸ್ಥೆಗಳಿಗೆ ಸಲ್ಲಿಕೆಯಾಗಿದ್ದು, ಈ ಪೈಕಿ 423 ಅರ್ಜಿಗಳಿಗೆ ರೂ. 52.85 ಕೋಟಿ ಸಾಲ ಮಂಜೂರಾಗಿರುತ್ತದೆ.

ಜಿಲ್ಲಾವಾರು ವಿವರವನ್ನು **ಅನುಬಂಧ–1ಅ, ಅನುಬಂಧ–1ಆ** ರಲ್ಲಿ ನೀಡಲಾಗಿದೆ.

| | | |
|---|---|---|
| ಇ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಜಿಲ್ಲಾ ಸಹಕಾರಿ ಸಂಘದ ಮೂಲಕ ಜಿಲ್ಲೆಯ ಹೊರಗಿನ ವ್ಯಕ್ತಿಗಳಿಗೆ ನೀಡಿರುವ ಸಾಲದ ಮೊತ್ತವೆಷ್ಟು; ಸಾಲ ನೀಡಲು ಅನುಸರಿಸುತ್ತಿರುವ ಮಾನದಂಡಗಳೇನು; ಇದರಲ್ಲಿ ಸುಸ್ತಿಯಾದ ಸಾಲದ ಮೊತ್ತವೆಷ್ಟು; ವಸೂಲಿಯಾದ ಸಾಲದ ಮೊತ್ತವೆಷ್ಟು; (ಸುಸ್ತಿದಾರರ ಸಹಿತ ವಿವರ ನೀಡುವುದು) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಸಹಕಾರಿ ಬ್ಯಾಂಕ್ ಜಿಲ್ಲೆಯ ಹೊರಗಿನ ವ್ಯಕ್ತಿಗಳಿಗೆ ನೀಡಿರುವ ಸಾಲದ ಮೊತ್ತ ರೂ.1661.44 ಕೋಟಿಗಳಾಗಿರುತ್ತದೆ.<br>ಈ ಸಾಲವನ್ನು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನೇತೃತ್ವದಲ್ಲಿ ಸಮೂಹ ಹಣಕಾಸು ವ್ಯವಸ್ಥೆಯಡಿ ನೀಡಿರುತ್ತದೆ.<br>ಇದರಲ್ಲಿ ಸುಸ್ತಿಯಾದ ಸಾಲದ ಮೊತ್ತ ರೂ.183.44 ಕೋಟಿಗಳಿದ್ದು, ವಸೂಲಿಯಾದ ಸಾಲದ ಮೊತ್ತ ರೂ.6.35 ಕೋಟಿಗಳಿರುತ್ತದೆ. ಸಾಲದ ವಿವರವನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಈ) | ರಾಜ್ಯದಲ್ಲಿ ಸಹಕಾರಿ ಸಂಸ್ಥೆಗಳ ಚುನಾವಣೆಯಲ್ಲಿ ಸಹಕಾರಿ ಸಂಸ್ಥೆಗಳ ಸದಸ್ಯರಿಗೆ ಮತದಾನ ಹಕ್ಕು ನೀಡಲು ಕನಿಷ್ಟ 2 ಅಥವಾ 3 ಮಹಾಸಭೆಗಳಿಗೆ ಭಾಗವಹಿಸುವುದು ಕಡ್ಡಾಯವೆಂದು ನಿಯಮ ಜಾರಿಯಲ್ಲಿರುವುದರಿಂದ ಶೇ.50 ಕ್ಕಿಂತ ಹೆಚ್ಚು ಸದಸ್ಯರು ಮತದಾನದಿಂದ ವಂಚಿತರಾಗುತ್ತಿದ್ದು, ಈ ಮಧ್ಯೆ ಕೆಲವೊಂದು ವ್ಯಕ್ತಿಗಳು ನ್ಯಾಯಾಲಯದಿಂದ ತಡೆಯಾಜ್ಞೆ ಮೂಲಕ ಚುನಾವಣಾ ಹಕ್ಕು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಗೊಂದಲ ನಿವಾರಣೆಗೆ ಮತ್ತು ಪಾರದರ್ಶಕ ಚುನಾವಣೆಗಾಗಿ ಸರ್ವ ಸದಸ್ಯರು ಭಾಗವಹಿಸುವಂತಾಗಲು ಮಹಾಸಭೆಗೆ ಹಾಜರಾಗುವ ಕಡ್ಡಾಯ ನಿಯಮವನ್ನು ರದ್ದುಪಡಿಸುವ ಮಾರ್ಪಡಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ?(ವಿವರ ನೀಡುವುದು) | ಹೌದು, ನ್ಯಾಯಾಲಯದಿಂದ ತಡೆಯಾಜ್ಞೆ ಮೂಲಕ ಚುನಾವಣಾ ಹಕ್ಕು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br>ಚುನಾವಣೆಗೆ ಸಂಬಂಧಿಸಿದಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಕ್ಕೆ ತಿದ್ದುಪಡಿ ತರಲು ಸರ್ಕಾರದ ಆದೇಶ ಸಂಖ್ಯೆ: ಸಿಒ 48 ಸಿಎಲ್ಎಂ 2022, ದಿ:15-07-2023 ರ ಪ್ರಕಾರ ಶಾಸಕರನ್ನೊಳಗೊಂಡ ಸಮಿತಿ ರಚಿಸಲಾಗಿದೆ. ಸಮಿತಿಯು ಅನೇಕ ಬಾರಿ ಸಭೆಗಳನ್ನು ನಡೆಸಲಾಗಿದ್ದು, ಸಮಿತಿಯು ಸಹಕಾರ ಸಂಘಗಳ ಕಾಯ್ದೆ 1959 ಹಾಗೂ ಸೌಹಾರ್ದ ಕಾಯ್ದೆ 1997 ರ ಅವಕಾಶಗಳ ಬಗ್ಗೆ ಪರಿಶೀಲಿಸಿ ಮಧ್ಯಂತರ ವರದಿಯನ್ನು ದಿನಾಂಕ: 10-01-2024 ರಂದು ಸಲ್ಲಿಸಿದ್ದು, ಪ್ರಸ್ತಾಪಿತ ಕಾಯ್ದೆಯ ತಿದ್ದುಪಡಿಯ ಕಾರ್ಯ ಪ್ರಗತಿಯಲ್ಲಿರುತ್ತದೆ. |

**ಸಂಖ್ಯೆ: ಸಿಒ 19 ಸಿಎಲ್ಎಸ್ 2024**

K. N. Rajanna

(ಕೆ.ಎನ್.ರಾಜಣ್ಣ)
ಸಹಕಾರ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 84 ಕ್ಕೆ ಅನುಬಂಧ-1 ಅ**

**ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಮತ್ತು ಪ್ಯಾಕ್ಸ್ ಗಳಲ್ಲಿ ರೂ.3 ಲಕ್ಷದಿಂದ 5.00 ಲಕ್ಷ ಅಲ್ಪಾವಧಿ ಹಾಗೂ ರೂ.10 ಲಕ್ಷದಿಂದ ರೂ.15.00 ಲಕ್ಷ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲಗಳ ವಿವರ (ರೂ.ಕೋಟಿಗಳಲ್ಲಿ)**

| ಕ್ರ.ಸಂ. | ಬ್ಯಾಂಕಿನ ಹೆಸರು | ಜಿಲ್ಲೆಯ ಹೆಸರು | ಅರ್ಜಿ ಸ್ವೀಕೃತಿ ಸಂಖ್ಯೆ | | | | ದಿನಾಂಕ 03.02.2024 ರವರೆಗೆ ಸಾಲ ವಿತರಣೆ | | | |
|---|---|---|---|---|---|---|---|---|---|---|
| | | | ಅಲ್ಪಾವಧಿ ಸಾಲ | | ಮಧ್ಯಮಾವಧಿ ಸಾಲ | | ಅಲ್ಪಾವಧಿ ಸಾಲ | | ಮಧ್ಯಮಾವಧಿ ಸಾಲ | |
| | | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1 | ಬೆಂಗಳೂರು | ಬೆಂ.ನಗರ | 0 | 0.00 | 3 | 0.30 | 0 | 0.00 | 3 | 0.30 |
| | | ಬೆಂ.ಗ್ರಾ. | 0 | 0.00 | 21 | 2.15 | 0 | 0.00 | 21 | 2.15 |
| | | ರಾಮನಗರ | 0 | 0.00 | 52 | 5.65 | 0 | 0.00 | 52 | 5.65 |
| 2 | ಕೋಲಾರ | ಕೋಲಾರ | 135 | 8.63 | 3 | 0.76 | 135 | 8.63 | 3 | 0.76 |
| | | ಚಿಕ್ಕಬಳ್ಳಾಪುರ | 76 | 5.18 | 2 | 0.24 | 76 | 5.18 | 2 | 0.24 |
| 3 | ಚಿತ್ರದುರ್ಗ | ಚಿತ್ರದುರ್ಗ | 3 | 0.12 | 2 | 0.35 | 3 | 0.12 | 2 | 0.29 |
| 4 | ತುಮಕೂರು | ತುಮಕೂರು | 0 | 0.00 | 9 | 1.35 | 0 | 0.00 | 9 | 1.05 |
| 5 | ಬೆಳಗಾವಿ | ಬೆಳಗಾವಿ | 223 | 11.15 | 48 | 7.35 | 191 | 9.55 | 28 | 4.20 |
| 6 | ವಿಜಯಪುರ | ವಿಜಯಪುರ | 23 | 1.15 | 0 | 0 | 23 | 1.15 | 0 | 0 |
| 7 | ಬಾಗಲಕೋಟೆ | ಬಾಗಲಕೋಟೆ | 0 | 0 | 0 | 0 | 0 | 0 | 0 | 0 |
| 8 | ಧಾರವಾಡ | ಧಾರವಾಡ | 726 | 23.95 | 2 | 0.30 | 641 | 22.73 | 1 | 0.15 |
| | | ಗದಗ | 602 | 20.40 | 9 | 1.35 | 434 | 14.59 | 7 | 1.05 |
| | | ಹಾವೇರಿ | 802 | 28.10 | 2 | 0.30 | 726 | 25.44 | 1 | 0.15 |
| 9 | ಉತ್ತರ ಕನ್ನಡ | ಉತ್ತರ ಕನ್ನಡ | 18 | 0.74 | 0 | 0 | 18 | 0.74 | 0 | 0 |
| 10 | ಮೈಸೂರು | ಮೈಸೂರು | 185 | 6.29 | 1 | 0.15 | 185 | 6.29 | 1 | 0.15 |
| | | ಚಾಮರಾಜನಗರ | 5 | 0.21 | 0 | 0.00 | 5 | 0.21 | 0 | 0.00 |
| 11 | ಮಂಡ್ಯ | ಮಂಡ್ಯ | 3 | 0.10 | 0 | 0.00 | 3 | 0.10 | 0 | 0.00 |
| 12 | ಹಾಸನ | ಹಾಸನ | 10 | 0.46 | 6 | 0.90 | 10 | 0.46 | 6 | 0.90 |
| 13 | ಚಿಕ್ಕಮಗಳೂರು | ಚಿಕ್ಕಮಗಳೂರು | 0 | 0 | 0 | 0 | 0 | 0 | 0 | 0 |
| 14 | ಕೊಡಗು | ಕೊಡಗು | 2352 | 118.63 | 26 | 3.43 | 2352 | 118.63 | 26 | 3.43 |
| 15 | ದಕ್ಷಿಣ ಕನ್ನಡ | ದಕ್ಷಿಣ ಕನ್ನಡ | 1362 | 63.93 | 1 | 0.13 | 1362 | 63.93 | 1 | 0.13 |
| | | ಉಡುಪಿ | 190 | 9.02 | 0 | 0.00 | 190 | 9.02 | 0 | 0.00 |
| | | | **6715** | **298.05** | **187** | **24.71** | **6354** | **286.76** | **163** | **20.6** |

L Sarala

ಸಹಕಾರ ಸಂಘಗಳ ಸಹಾಯಕ ನಿಬಂಧಕರು(ಪತ್ತು)

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 84 ಕ್ಕೆ ಅನುಬಂಧ-1 ಆ

ಪಿಕಾರ್ಡ್ ಬ್ಯಾಂಕ್ ಗಳಲ್ಲಿ ರೂ.3 ಲಕ್ಷದಿಂದ 5.00 ಲಕ್ಷ ಅಲ್ಪಾವಧಿ ಹಾಗೂ ರೂ.10 ಲಕ್ಷದಿಂದ ರೂ.15.00 ಲಕ್ಷ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲಗಳ ವಿವರ (ರೂ.ಕೋಟಿಗಳಲ್ಲಿ)

| ಕ್ರ. ಸಂ. | ಬ್ಯಾಂಕಿನ ಹೆಸರು | ಜಿಲ್ಲೆಯ ಹೆಸರು | ಅರ್ಜಿ ಸ್ವೀಕೃತಿ ಸಂಖ್ಯೆ | | | | ದಿನಾಂಕ:03-02-2024 ರವರೆಗೆ ಸಾಲ ವಿತರಣೆ | | | |
|---|---|---|---|---|---|---|---|---|---|---|
| | | | ಅಲ್ಪಾವಧಿ | | ಮಧ್ಯಮಾವಧಿ/ದೀರ್ಘಾವಧಿ | | ಅಲ್ಪಾವಧಿ | | ಮಧ್ಯಮಾವಧಿ/ದೀರ್ಘಾವಧಿ | |
| | | | ಸಂಖ್ಯೆ | ಮೊತ್ತ | ಸಂಖ್ಯೆ | ಮಂಜೂರಾದ ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1 | 2 | 3 | 4 | 5 | 6 | 7 | 12 | 13 | 14 | 15 |
| 1 | ಕಸ್ಕಾರ್ಡ್ ಬ್ಯಾಂಕ್ | ಬೆಂಗಳೂರು ನಗರ | 0 | 0 | 11 | 1.49 | 0 | 0 | 11 | 1.49 |
| 2 | | ಬೆಂಗಳೂರು (ಗ್ರಾ) | 0 | 0 | 4 | 0.55 | 0 | 0 | 4 | 0.55 |
| 3 | | ರಾಮನಗರ | 0 | 0 | 1 | 0.13 | 0 | 0 | 1 | 0.13 |
| 4 | | ಕೋಲಾರ | 0 | 0 | 11 | 1.54 | 0 | 0 | 11 | 1.54 |
| 5 | | ಚಿಕ್ಕಬಳ್ಳಾಪುರ | 0 | 0 | 6 | 0.72 | 0 | 0 | 6 | 0.72 |
| 6 | | ತುಮಕೂರು | 0 | 0 | 6 | 1.25 | 0 | 0 | 6 | 1.25 |
| 7 | | ಚಿತ್ರದುರ್ಗ | 0 | 0 | 0 | 0 | 0 | 0 | 0 | 0 |
| 8 | | ಶಿವಮೊಗ್ಗ | 0 | 0 | 2 | 0.30 | 0 | 0 | 2 | 0.30 |
| 9 | | ದಾವಣಗೆರೆ | 0 | 0 | 1 | 0.15 | 0 | 0 | 1 | 0.15 |
| 10 | | ಮೈಸೂರು | 0 | 0 | 10 | 1.10 | 0 | 0 | 10 | 1.10 |
| 11 | | ಚಾಮರಾಜನಗರ | 0 | 0 | 6 | 0.72 | 0 | 0 | 6 | 0.72 |
| 12 | | ಕೊಡಗು | 0 | 0 | 50 | 6.91 | 0 | 0 | 50 | 6.91 |
| 13 | | ಮಂಡ್ಯ | 0 | 0 | 3 | 0.36 | 0 | 0 | 3 | 0.36 |
| 14 | | ಹಾಸನ | 0 | 0 | 0 | 0 | 0 | 0 | 0 | 0 |
| 15 | | ಚಿಕ್ಕಮಗಳೂರು | 0 | 0 | 15 | 2.15 | 0 | 0 | 15 | 2.15 |
| 16 | | ದಕ್ಷಿಣ ಕನ್ನಡ | 0 | 0 | 21 | 2.36 | 0 | 0 | 21 | 2.36 |
| 17 | | ಉಡುಪಿ | 0 | 0 | 5 | 0.57 | 0 | 0 | 5 | 0.57 |
| 18 | | ಬೆಳಗಾವಿ | 0 | 0 | 17 | 1.91 | 0 | 0 | 17 | 1.91 |
| 19 | | ಬಿಜಾಪುರ | 0 | 0 | 13 | 1.22 | 0 | 0 | 13 | 1.22 |
| 20 | | ಬಾಗಲಕೋಟೆ | 0 | 0 | 22 | 2.28 | 0 | 0 | 22 | 2.28 |
| 21 | | ಧಾರವಾಡ | 0 | 0 | 6 | 0.68 | 0 | 0 | 6 | 0.68 |
| 22 | | ಗದಗ | 0 | 0 | 4 | 0.43 | 0 | 0 | 4 | 0.43 |
| 23 | | ಹಾವೇರಿ | 0 | 0 | 1 | 0.12 | 0 | 0 | 1 | 0.12 |
| 24 | | ಉತ್ತರ ಕನ್ನಡ | 0 | 0 | 0 | 0 | 0 | 0 | 0 | 0 |
| 25 | | ಗುಲ್ಬರ್ಗಾ | 0 | 0 | 10 | 1.11 | 0 | 0 | 10 | 1.11 |
| 26 | | ಯಾದಗಿರಿ | 0 | 0 | 8 | 0.87 | 0 | 0 | 8 | 0.87 |
| 27 | | ರಾಯಚೂರು | 0 | 0 | 2 | 0.26 | 0 | 0 | 2 | 0.26 |
| 28 | | ಕೊಪ್ಪಳ | 0 | 0 | 2 | 0.30 | 0 | 0 | 2 | 0.30 |
| 29 | | ಬೀದರ್ | 0 | 0 | 21 | 2.51 | 0 | 0 | 21 | 2.51 |
| 30 | | ಬಳ್ಳಾರಿ | 0 | 0 | 2 | 0.26 | 0 | 0 | 2 | 0.26 |
| | | ಒಟ್ಟು | 0 | 0 | 260 | 32.25 | 0 | 0 | 260 | 32.25 |

L Sarala

ಸಹಕಾರ ಸಂಘಗಳ ಸಹಾಯಕ ನಿಬಂಧಕರು(ಪತ್ತು)

ಅನುಬಂಧ - 2

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 84 ಕ್ಕೆ ಉತ್ತರ ರೂ. ಕೋಟಿಗಳಲ್ಲಿ

| ಕ್ರ.ಸಂ | ಸಕ್ಕರೆ ಕಾರ್ಖಾನೆಗೆ ನೀಡಿದ ಸಾಲ ದಿ:31-01-2024 ಕ್ಕೆ ಹೊರಬಾಕಿ ಕಾರ್ಖಾನೆ ಹೆಸರು | ದಿ:31-01-2024 ಕ್ಕೆ ಹೊರ ಬಾಕಿ | ದಿ:31-01-2024 ಕ್ಕೆ ಸುಸ್ತಿ ಬಾಕಿ | ಸಾಲ ವಸೂಲಿ ನಂತರ ವಸೂಲಾದ ಮೊತ್ತ |
|---|---|---|---|---|
| 1 | ಬೀಳಗಿ ಶುಗರ್ಸ್ ಲಿ., ಬೀಳಗಿ ತಾಲೂಕು, ಬಾಗಲಕೋಟ್ ಜಿಲ್ಲೆ | 80.35 | 11.29 | |
| 2 | ಹರ್ಷ ಶುಗರ್ಸ್ ಲಿ., ಸವದತ್ತಿ, ಬೆಳಗಾವಿ ಜಿಲ್ಲೆ | 51.46 | 9.65 | |
| 3 | ಬೀದರ್ ಕಿಸಾನ್ ಸಕ್ಕರ್ ಕಾರ್ಖಾನೆ ಲಿ., ಮೊಗ್‌ದಾಲ್, ಬೀದರ್ ಜಿಲ್ಲೆ | 25.01 | 0.00 | |
| 4 | ಶ್ರೀ ಸಾಯಿಪ್ರಿಯ ಶುಗರ್ಸ್ ಲಿ., ಜಮಖಂಡಿ ತಾಲೂಕು, ಬಾಗಲಕೋಟೆ ಜಿಲ್ಲೆ | 139.58 | 2.92 | |
| 5 | ಶ್ರೀ ಚಾಮುಂಡೇಶ್ವರಿ ಶುಗರ್ಸ್ ಲಿ., ಮದ್ದೂರು, ಮಂಡ್ಯ ಜಿಲ್ಲೆ. | 106.44 | 2.48 | |
| 6 | ನಿರಾಣಿ ಶುಗರ್ಸ್ ಲಿ., ಮೊಗ್ ದಾಲ್, ಬಾಗಲಕೋಟೆ ಜಿಲ್ಲೆ | 101.90 | 6.79 | |
| 7 | ಸಂಗಮ್ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಹಿಡ್ ಕಲ್ ಡ್ಯಾಮ್, ಬೆಳಗಾವಿ ಜಿಲ್ಲೆ | 15.22 | 1.52 | |
| 8 | ಶಿರಗುಪ್ಪಿ ಶುಗರ್ಸ್ ವರ್ಕ್ಸ್ ಲಿ., ಕಾಗ್‌ವಾಡ್, ಬೆಳಗಾವಿ ಜಿಲ್ಲೆ. | 82.45 | 1.90 | |
| 9 | ಜಮಖಂಡಿ ಶುಗರ್ಸ್ ಲಿ., ಹಿರೆಪಡಸಾಲಗಿ, ಬಾಗಲಕೋಟೆ ಜಿಲ್ಲೆ. | 152.98 | 22.35 | |
| 10 | ಎಂ.ಆರ್.ಎನ್. ಪವರ್ ಇಂಡಿಯಾ ಲಿ., ಬಾದಾಮಿ ತಾಲೂಕು, ಬಾಗಲಕೋಟೆ ಜಿಲ್ಲೆ. | 44.26 | 0.98 | |
| 11 | ಸಂಗಮ್ ನಾಥ್ ಶುಗರ್ಸ್ ಲಿ., ಸಿಂದಗಿ ತಾಲೂಕು, ವಿಜಯಪುರ ಜಿಲ್ಲೆ | 152.71 | 9.16 | 2.35 |
| 12 | ಮೆಲ್‌ಬ್ರೊ ಶುಗರ್ಸ್(ಪ್ರೈ) ಲಿ., ಶಿರೂರು, ಬಾಗಲಕೋಟೆ ಜಿಲ್ಲೆ. | 63.19 | 0.00 | |
| 13 | ಶ್ರೀ ಬಾಲಾಜಿ ಶುಗರ್ಸ್& ಕೆಮಿಕಲ್ಸ್ (ಪ್ರೈ) ಲಿ. | 35.54 | 0.00 | |
| 14 | ಶಾಮನೂರು ಶುಗರ್ಸ್ ಲಿ. | 6.77 | 0.52 | |
| 15 | ಮೈಲಾರ್ ಶುಗರ್ಸ್ ಲಿ., ಹೂವಿನಹಡಗಲಿ ತಾಲೂಕು, ಬಳ್ಳಾರಿ ಜಿಲ್ಲೆ. | 78.60 | 11.10 | 0.50 |
| 16 | ಶ್ರೀ ಕೇದಾರ್‌ನಾಥ್ ಶುಗರ್ಸ್& ಆಗ್ರೋ ಪ್ರೊಡಕ್ಟ್ ಲಿ., ಬಾದಾಮಿ ತಾಲೂಕು, ಬಾಗಲಕೋಟೆ ಜಿಲ್ಲೆ. | 81.39 | 3.77 | |
| 17 | ಸಾವ್‌ಸನ್ ಡಿಸ್ಟಿಲರಿ ಪ್ರೈ. ಲಿ. | 15.67 | 1.92 | |
| 18 | ಶ್ರೀ ಪ್ರಭುಲಿಂಗೇಶ್ವರ ಶುಗರ್ಸ್& ಕೆಮಿಕಲ್ಸ್ ಲಿ. | 30.00 | 0.00 | |
| 19 | ಶ್ರೀ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ ಲಿ. | 65.62 | 8.75 | |
| 20 | ವಿವಿಎನ್‌ಪಿ ಡಿಸ್ಟಿಲ್ಲರೀಸ್ & ಶುಗರ್ಸ್ ಪ್ರೈ. ಲಿ. | 51.38 | 0.00 | |
| 21 | ಕಾರ್ತಿಕ್ ಆಗ್ರೋ ಇಂಡಸ್ಟ್ರೀಸ್ ಪ್ರೈ. ಲಿ. | 51.15 | 0.00 | |
| 22 | ಆಸ್ಕಿ ನ್ ಬಯೋಪ್ಯುಯೆಲ್ಸ್ ಪ್ರೈ. ಲಿ. | 42.20 | 2.82 | |
| 23 | ಇಂಡಿಯನ್ ಕ್ಯಾನ್ ಪವರ್ ಲಿ., ಘಟಕ: ಅಲಗವಾಡಿ ಬೀರೇಶ್ವರ ಶುಗರ್ಸ್ | 29.40 | 0.00 | |
| 24 | ಅರಿಹಂತ್ ಶುಗರ್ಸ್ ಇಂಡಸ್ಟ್ರೀಸ್ ಲಿ., ಚಿಕ್ಕೋಡಿ ತಾಲೂಕು, ಬೆಳಗಾವಿ ಜಿಲ್ಲೆ. | 48.21 | 3.57 | 3.50 |
| 25 | ಶ್ರೀ ಭೀಮಾಶಂಕರ್ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಇಂಡಿ ತಾಲೂಕು. | 10.00 | 0.00 | |
| 26 | ಪ್ರಭೃತಿ ಎಥನಾಲ್ ಪ್ರೈ. ಲಿ. | 10.50 | 0.00 | |
| 27 | ಸೊವೆರಿನ್ ಇಂಡಸ್ಟ್ರೀಸ್ ಲಿ., ತೇರ್‌ದಾಲ್ ಜಮಖಂಡಿ ತಾ., ಬಾಗಲಕೋಟೆ ಜಿಲ್ಲೆ. | 64.88 | 57.37 | |
| 28 | ಸೌಭಾಗ್ಯಲಕ್ಷ್ಮೀ ಶುಗರ್ಸ್ ಲಿ., ಗೋಕಾಕ್ ತಾಲೂಕು, ಬೆಳಗಾವಿ ಜಿಲ್ಲೆ. | 24.58 | 24.58 | |
| | ಜುಮ್ಲಾ | 1661.44 | 183.44 | 6.35 |

ಸಹಕಾರ ಸಂಘಗಳ ಸಹಾಯಕ ನಿಬಂಧಕರು(ಪತ್ತು)